

بِسۡمِ اللّٰہِ الرَّحۡمٰنِ الرَّحِیۡمِ

# ಹೃದಯಸ್ಪರ್ಶಿ ಪ್ರಾರ್ಥನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **16-02-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ನಾನು ಅಲ್ಲಾಹನನ್ನು ನಂಬುತ್ತೇನೆ ಎಂದು ವಾದಿಸುವ ಒಬ್ಬ ಸತ್ಯವಿಶ್ವಾಸಿ ಅಲ್ಲಾಹನ ಈ ಆಜ್ಞೆಯನ್ನು ಯಾವಾಗಲೂ ತನ್ನ ಮುಂದೆ ಇರಿಸಬೇಕಾಗಿದೆ. ಅಲ್ಲಾಹನು ನಮ್ಮನ್ನು ಅವನನ್ನು ಆರಾಧಿಸುವುದಕ್ಕೋಸ್ಕರ ಸೃಷ್ಟಿಸಿದ್ದಾನೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: **ವಮಾ ಖಲಖ್ತುಲ್ ಜಿನ್ನ ವಲ್ ಇನ್‌ಸ ಇಲ್ಲಾ ಲಿಯಅ್‌ಬುದೂನ್.** ನನ್ನನ್ನು ಆರಾಧಿಸಲಿಕ್ಕೋಸ್ಕರ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ. (ಪವಿತ್ರ ಖುರ್‌ಆನ್ 51:57). ಆರಾಧನೆ ಮಾಡಬೇಕಾದ ರೀತಿಯನ್ನು ಸಹ ಅಲ್ಲಾಹನು ನಮಗೆ ಕಲಿಸಿರುವನು. ಅದರಲ್ಲಿ ಕಾರ್ಯರೂಪದ ಭಾಗವಿದೆ. ಎಂದರೆ ಅಂಗವಿನ್ಯಾಸಗಳು ಮತ್ತು ಪ್ರಾರ್ಥನೆಗಳು ಇವೆ. ಪ್ರಾರ್ಥನೆಗಳನ್ನು ಝಿಕ್ರ್ ಎಂದು ಸಹ ಹೇಳಬಹುದಾಗಿದೆ. ನಮಾಝ್‌ನಲ್ಲಿ ಈ ಎರಡು ವಿಷಯಗಳೂ ಸೇರಿವೆ. ಬಾಹ್ಯವಾಗಿ ಕಾಣುವ ಅಂಗ ವಿನ್ಯಾಸಗಳು ಮತ್ತು ಝಿಕ್ರ್‌ಗಳು, ದುಆಗಳು ಇವೆ. ನಮಾಝ್‌ಗಳನ್ನು ಅನುಷ್ಠಿಸುವುದು ಮಾತ್ರವಲ್ಲ ಅವುಗಳಲ್ಲದೆ ಬೇರೆ ಝಿಕ್ರ್‌ಗಳೂ ದುಆಗಳೂ ಇವೆ. ಅಲ್ಲಾಹನನ್ನು ಯಾವಾಗಲೂ ಸ್ಮರಿಸುವುದು ಸತ್ಯವಿಶ್ವಾಸಿಯ ಕೆಲಸವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಅನೇಕ ಪ್ರಾರ್ಥನೆಗಳನ್ನು ವಿವಿಧ ಪ್ರವಾದಿಗಳಿಗೆ ಸಂಬಂಧಿಸಿ ವಿವರಿಸಿದ್ದಾನೆ. ನಾವು ಅವುಗಳನ್ನು ನಮ್ಮ ನಮಾಝ್‌ಗಳಲ್ಲಿ ಪಠಿಸಬಹುದಾಗಿದೆ. ನಡೆದಾಡುತ್ತಿರುವಾಗ ಝಿಕ್ರ್ ರೂಪದಲ್ಲಿ ಸಹ ಪಠಿಸಬಹುದಾಗಿದೆ. ಜನರು ತಮ್ಮ ಪತ್ರಗಳಲ್ಲಿ ಹೀಗೆ ಬರೆಯುತ್ತಾರೆ: ನಮಗೆ ಇಂತಿಂತಹ ಕಷ್ಟಗಳಿವೆ, ಆತಂಕಗಳಿವೆ. ನಮಗೆ ಯಾವುದಾದರೂ ದುಆ ಮತ್ತು ಝಿಕ್ರ್ ಸೂಚಿಸಿರಿ. ಅವುಗಳನ್ನು ನಾವು ಪುನರಾವರ್ತಿಸುತ್ತಾ ಪಠಿಸುವೆವು. ಅವುಗಳ ಮೂಲಕ ನಮ್ಮ ಕಷ್ಟ ಮತ್ತು ಆತಂಕ ನಿವಾರಣೆ ಆಗಲಿ ಎಂದು ಬರೆಯುತ್ತಾರೆ. ನಾನು ಹೆಚ್ಚಾಗಿ ಜನರಿಗೆ ಬರೆಯುವುದು ನೀವು ನಮಾಝ್‌ಗಳ ಕ್ರಮಬದ್ಧ ಅನುಷ್ಠಾನದ ಬಗ್ಗೆ ಶ್ರದ್ಧೆ ನೀಡಿರಿ ಎಂದು. ಸುಜೂದ್‌ಗಳಲ್ಲಿ ಪ್ರಾರ್ಥಿಸಿರಿ. ನಮಾಝ್‌ನಲ್ಲಿ ಪ್ರಾರ್ಥಿಸುತ್ತಾ ನೀವು ಅಲ್ಲಾಹನಿಂದ ಸಹಾಯ ಬೇಡಿಕೊಳ್ಳಿರಿ ಎಂದೆಲ್ಲಾ ಅವರಿಗೆ ತಿಳಿಸುತ್ತೇನೆ. ಆದರೆ ಇಂದು ನಾನು ಒಂದು ಝಿಕ್ರ್ ಬಗ್ಗೆ ವಿವರಿಸುವೆನು. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುನ್ನತ್ (ನಡೆವಳಿಕೆ) ಸಹ ಆಗಿದೆ. ಅವು ಅಲ್ಲಾಹನಿಂದ ಅವತೀರ್ಣಗೊಂಡ ಪ್ರಾರ್ಥನೆಗಳೂ ಆಗಿವೆ. ಅವುಗಳ ಅರ್ಥಗಳ ಬಗ್ಗೆ ಚಿಂತಿಸಿ ಅವುಗಳನ್ನು ಪಠಿಸುವುದಾದರೆ ಮನುಷ್ಯನಿಗೆ ಅಲ್ಲಾಹನ ಏಕತ್ವದ ಬಗ್ಗೆ ಅರಿವು ಲಭಿಸುತ್ತವೆಯಲ್ಲದೆ ಮನುಷ್ಯನು ಅಲ್ಲಾಹನ ಸಂರಕ್ಷಣೆ ಮತ್ತು ಆಶ್ರಯಪಡೆಯುವವನಾಗುತ್ತಾನೆ. ಅವನು ಎಲ್ಲಾ ವಿಧಗಳ ಕೆಡುಕುಗಳಿಂದ ಸುರಕ್ಷಿತವಾಗುತ್ತಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಪ್ರತಿದಿನ ರಾತ್ರಿ ಮಲಗುವ ಮೊದಲು ಪವಿತ್ರ ಖುರ್‌ಆನಿನ ಈ ವಚನಗಳನ್ನು ಮತ್ತು ಪ್ರಾರ್ಥನೆಗಳನ್ನು ಪಠಿಸುತ್ತಿದ್ದರಲ್ಲದೆ ಸಹಾಬರೊಂದಿಗೆ ಸಹ ಅವುಗಳನ್ನು ಪಠಿಸಲು ಉಪದೇಶಿಸುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನೇಕ ಸ್ಥಳಗಳಲ್ಲಿ ಈ ಪ್ರಾರ್ಥನೆಗಳ ಮಹತ್ವವನ್ನು ಮತ್ತು ಪ್ರಯೋಜನಗಳನ್ನು ವಿವರಿಸಿರುವರು.

ಹದೀಸಿನಲ್ಲಿ ಹೀಗೆ ವರದಿಯಾಗಿವೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರತಿದಿನ ನಿದ್ರಿಸುವ ಮೊದಲು ಆಯತುಲ್ ಕುರ್‌ಸೀ, ಸೂರಃ ಇಖ್‌ಲಾಸ್, ಸೂರತುಲ್ ಫಲಖ್ ಮತ್ತು ಸೂರತುನ್ನಾಸ್ ಮೂರು ಸಾರಿ ಪಠಿಸಿ ತನ್ನ ಕೈಗಳಿಗೆ ಊದುತ್ತಿದ್ದರು. ಅನಂತರ ತನ್ನ ಕೈಗಳನ್ನು ತನ್ನ ಶರೀರದ ಮೇಲೆ ಸವರುತ್ತಿದ್ದರು. ತಲೆಯಿಂದ ಪ್ರಾರಂಭಿಸಿ ತನ್ನ ಕೈಗಳು ತಲಪುವ ಸ್ಥಳದ ತನಕ ಶರೀರವನ್ನು ಸವರುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿರಂತರವಾಗಿ ಮಾಡುತ್ತಿದ್ದ ಕೆಲಸವನ್ನು ಎಂದರೆ ಅವರ ನಡೆವಳಿಕೆಯನ್ನು ಪ್ರತಿಯೊಬ್ಬ ಮುಸ್ಲಿಮನು ಅನುಷ್ಠಾನಕ್ಕೆ ತರಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿಯೊಂದು ನಡೆವಳಿಕೆಯನ್ನು ಅಹ್ಮದಿಯರಾದ ನಾವು ಅನುಷ್ಠಾನಕ್ಕೆ ತರಬೇಕೆಂದು ಈ ಕಾಲಘಟ್ಟದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಮಾರ್ಗದರ್ಶನ ನೀಡಿದ್ದಾರೆ. ನಾವು ಇವುಗಳನ್ನು ಅನುಷ್ಠಾನಕ್ಕೆ ತರಲು ವಿಶಿಷ್ಟವಾಗಿ ಪ್ರಯತ್ನಿಸಬೇಕು. ನಾವು ಈಗ ಯಾವ ಪರಿಸ್ಥಿತಿಯಲ್ಲಿ ಜೀವಿಸುತ್ತಿರುವೆವೋ ಆ ಕಾರಣದಿಂದ ನಾವು ನಮಾಝ್‌ಗಳ ಬಗ್ಗೆ ಪ್ರಾರ್ಥನೆಗಳ ಬಗ್ಗೆ ಮತ್ತು ಝಿಕ್ರ್‌ಗಳ ಬಗ್ಗೆ ವಿಶಿಷ್ಟವಾಗಿ ಲಕ್ಷ್ಯ ನೀಡಿ ನಮ್ಮ ವೈಯ್ಯಕ್ತಿಕ ಆಧ್ಯಾತ್ಮಿಕ ಮತ್ತು ಲೌಕಿಕ ಆವಶ್ಯಕತೆಗಳನ್ನು ಈಡೇರಿಸಲು ಶ್ರದ್ಧೆ ಹರಿಸಬೇಕಾಗಿದೆ. ಅದರೊಂದಿಗೆ ಜಮಾಅತನ್ನು ಪಿತೂರಿಗಳಿಂದ, ಅಸ್ತವ್ಯಸ್ತತೆಗಳಿಂದ, ಅಸೂಯಗಾರರ ಮತ್ತು ಶತ್ರುಗಳ ಕೆಡುಕುಗಳಿಂದ ರಕ್ಷಿಸಲ್ಪಡಲು ಇವುಗಳನ್ನು ಅತ್ಯಂತ ಮುಖ್ಯ ಫರ್ಝ್ ಎಂದು ಮನವರಿಕೆ ಮಾಡಿಕೊಂಡು ಅವುಗಳ ಕಡೆಗೆ ಗಮನ ಹರಿಸಬೇಕು. ಈ ಝಿಕ್ರ್ ಮತ್ತು ಪವಿತ್ರ ಖುರ್‌ಆನ್ ವಚನಗಳ ಮಹತ್ವದ ಬಗ್ಗೆ ಬೇರೆ ಕೆಲವು ಹದೀಸುಗಳು ಸಹ ಇವೆ. ಅವುಗಳನ್ನು ನಿಮ್ಮ ಮುಂದೆ ಇರಿಸುವೆನು. ಆಯತುಲ್ ಕುರ್‌ಸೀ ಬಗ್ಗೆ ಎರಡು ವಾರ ಮೊದಲು ನಾನು ವಿವರಿಸಿರುವೆನು. ಆದುದರಿಂದ ಈ ದಿನ ನಾನು ಪವಿತ್ರ ಖುರ್‌ಆನಿನ ಕೊನೆಯಲ್ಲಿರುವ ಮೂರು ಸೂರತ್‌ಗಳ ಬಗ್ಗೆ ಹದೀಸುಗಳನ್ನು ವಿವರಿಸುವೆನು.

ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ವರದಿ ಮಾಡುತಾರೆ: ಪ್ರತಿ ರಾತ್ರಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಾಸಿಗೆಯಲ್ಲಿ ಮಲಗಿ ತಮ್ಮ ಅಂಗೈಗಳನ್ನು ಜೋಡಿಸಿ ಅವುಗಳಲ್ಲಿ ಖುಲ್ ಹೂವಲ್ಲಾಹು ಅಹದ್, ಖುಲ್ ಅಊಝುಬಿರಬ್ಬಿಲ್ ಫಲಖ್ ಮತ್ತು ಖುಲ್ ಅಊಝುಬಿರಬ್ಬಿನ್ನಾಸ್ ಎಂದು ಪ್ರಾರಂಭವಾಗುವ ಅಧ್ಯಾಯಗಳನ್ನು ಪಠಿಸಿ ಊದುತ್ತಿದ್ದರು. ಅನಂತರ ತಮಗೆ ಸಾಧ್ಯವಿರುವಷ್ಟು ಮಟ್ಟಿಗೆ ಶರೀರದ ಮೇಲೆ ಅಂಗೈಗಳನ್ನು ಸವರುತ್ತಿದ್ದರು. ಅವರು ತನ್ನ ತಲೆ ಮತ್ತು ಮುಖದ ಮೇಲೆ ತನ್ನ ಎರಡು ಅಂಗೈಗಳನ್ನು ಸವರಲು ಪ್ರಾರಂಭಿಸುತ್ತಿದ್ದರು. ಅವರ ಕೈ ತಲಪುವ ಸ್ಥಳದ ತನಕ ಅಂಗೈಗಳಿಂದ ಶರೀರವನ್ನು ಸವರುತ್ತಿದ್ದರು. ಅವರು ಮೂರು ಸಾರಿ ಹೀಗೆ ಮಾಡುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಷ್ಟು ನಿರಂತರವಾಗಿ ಪ್ರತಿ ರಾತ್ರಿ ಹೀಗೆ ಮಾಡುತ್ತಿದ್ದರೆಂದರೆ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಮ್ಮ ಅಂತಿಮ ರೋಗಾವಸ್ಥೆಯಲ್ಲಿದ್ದಾಗ ಸ್ವತಃ ಈ ಮೂರು ಸೂರತುಗಳನ್ನು ಮತ್ತು ಆಯತುಲ್ ಕುರ್‌ಸೀ ಪಠಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಂಗೈಗಳಿಗೆ ಊದಿ ಅವರ ಕೈಗಳಿಂದಲೇ ಅವರ ಶರೀರ ಭಾಗಗಳನ್ನು ಸವರುವಂತೆ ಮಾಡುತ್ತಿದ್ದರು. ಹೀಗೆ ಮಾಡಲು ಕಾರಣವೇನೆಂದರೆ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರತಿರಾತ್ರಿ ಹಾಗೆ ಮಾಡುವುದನ್ನು ಕಂಡಿದ್ದರು. ಅದರ ಅನುಗ್ರಹ ಅವರಿಗೆ ಬಹಳ ಚೆನ್ನಾಗಿ ಸ್ಪಷ್ಟವಾಗಿ ತಿಳಿದಿತ್ತು.

ಸಹಾಬರಿಗೆ ಈ ಮೂರು ಸೂರತ್‌ಗಳ ಅನುಗ್ರಹಗಳು ಮತ್ತು ಮಹತ್ವದ ಬಗ್ಗೆ ಹೇಗೆ ತಿಳಿಸಲಾಯಿತು ಎಂಬುದರ ಬಗ್ಗೆ ಹಝ್ರತ್ ಉಖ್‌ಬಾ ಬಿನ್ ಆಮಿರ್ ಹೇಳುತ್ತಾರೆ: ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾದಾಗ ಅವರು ಹೇಳಿದರು: ಓ ಉಖ್‌ಬಾ ಬಿನ್ ಆಮಿರ್, ತೌರಾತ್, ಇಂಜೀಲ್, ಝುಬೂರ್ ಮತ್ತು ಪವಿತ್ರ ಖುರ್‌ಆನ್‌ಗಳಲ್ಲಿ ಅವತೀರ್ಣಗೊಂಡ ಸೂರತ್‌ಗಳಲ್ಲಿ ಮೂರು ಅತ್ಯುತ್ತಮ ಸೂರತ್‌ಗಳ ಬಗ್ಗೆ ನಾನು ತಿಳಿಸಲೇ? ನಾನು ಹೇಳಿದೆ: ತಾವು ತಿಳಿಸಿರಿ, ಅಲ್ಲಾಹನು ನನ್ನನ್ನು ತಮಗೋಸ್ಕರ ಆತ್ಮಾರ್ಪಣೆ ಮಾಡುವವನನ್ನಾಗಿ ಮಾಡಲಿ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು, ಖುಲ್ ಹೂವಲ್ಲಾಹು ಅಹದ್, ಖುಲ್ ಅಊಝುಬಿರಬ್ಬಿಲ್ ಫಲಖ್ ಮತ್ತು ಖುಲ್ ಅಊಝುಬಿರಬ್ಬಿನ್ನಾಸ್ ಎಂದು ಪ್ರಾರಂಭವಾಗುವ ಮೂರು ಸೂರತ್‌ಗಳನ್ನು ಪಠಿಸಿದರು ಮತ್ತು ಹೇಳಿದರು: ಓ ಉಖ್‌ಬಾ, ನೀವು ಅವುಗಳನ್ನು ಮರೆತುಬಿಡಬಾರದು. ನೀವು ಅವನ್ನು ಪಠಿಸದೆ ಇರುವ ಒಂದು ರಾತ್ರಿಯೂ ದಾಟಿ ಹೋಗಬಾರದು.

ಸೂರತುಲ್ ಇಖ್‌ಲಾಸಿನ ಮಹತ್ವದ ಬಗ್ಗೆ ಹಝ್ರತ್ ಅಬೂ ಸಈದ್ ಖುದ್ರಿ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಒಬ್ಬ ವ್ಯಕ್ತಿ ಖುಲ್‌ಹುವಲ್ಲಾಹು ಅಹದ್ ಎಂದು ಪ್ರಾರಂಭವಾಗುವ ಸೂರತನ್ನು ಪದೇ ಪದೇ ಪಠಿಸುತ್ತಿರುವುದನ್ನು ಒಬ್ಬರು ಕಂಡರು. ಅದನ್ನು ಆಲಿಸಿದ ವ್ಯಕ್ತಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಅದರ ಬಗ್ಗೆ ದೂರು ನೀಡಿದರು. ಅವರ ದೃಷ್ಟಿಯಲ್ಲಿ ಹಾಗೆ ಪಠಿಸುತ್ತಿದ್ದವನು ಕೆಳಮಟ್ಟದವನೆಂಬ ಭಾವನೆ ಇತ್ತು. ದೂರನ್ನು ಆಲಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನನ್ನ ಜೀವ ಯಾರ ಕೈಯಲ್ಲಿದೆಯೋ ಅವನ ಹೆಸರಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ. ಖುಲ್‌ಹುವಲ್ಲಾಹು ಅಹದ್ ಎಂದು ಪ್ರಾರಂಭವಾಗುವ ಸೂರತ್ ಪವಿತ್ರ ಖುರ್‌ಆನಿನ ಮೂರನೆಯ ಒಂದು ಭಾಗಕ್ಕೆ ಸಮವಾಗಿದೆ. ಹಝ್ರತ್ ಅಬೂ ಸಈದ್ ಖುದ್ರಿ[ರ] ಇನ್ನೊಂದು ವರದಿಯಲ್ಲಿ ಹೀಗೆ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪವಿತ್ರ ಖುರ್‌ಆನಿನ ಮೂರನೆಯ ಒಂದು ಭಾಗವನ್ನು ಒಂದು ರಾತ್ರಿಯಲ್ಲಿ ಪಠಿಸಲು ಸಾಧ್ಯವಿಲ್ಲದವರು ಯಾರಾದರೂ ಇದ್ದಾರೆಯೇ? ಸಹಾಬರಿಗೆ ಈ ವಿಷಯ ಬಹಳ ಅಸಾಧ್ಯವಾದುದೆಂದು ತೋಚಿತು. ಅವರು ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ಪವಿತ್ರ ಖುರ್‌ಆನಿನ ಮೂರನೆಯ ಒಂದು ಭಾಗ ಒಂದು ರಾತ್ರಿಯಲ್ಲಿ ಓದಿ ಮುಗಿಸುವ ಶಕ್ತಿ ನಮ್ಮ ಪೈಕಿ ಯಾರಿಗಿದೆ? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಸೂರತುಲ್ ಇಖ್‌ಲಾಸ್ ಪವಿತ್ರ ಖುರ್‌ಆನಿನ ಮೂರನೆಯ ಒಂದು ಭಾಗಕ್ಕೆ ಸಮವಾಗಿದೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸೂರತುಲ್ ಇಖ್‌ಲಾಸನ್ನು ಪವಿತ್ರ ಖುರ್‌ಆನಿನ ಮೂರನೆಯ ಒಂದು ಭಾಗಕ್ಕೆ ಸಮವೆಂದು ಏಕೆ ಹೇಳಿದರು? ಅದಕ್ಕೆ ಕಾರಣವೇನೆಂದರೆ ಅಲ್ಲಾಹನು ಪವಿತ್ರ ಖುರ್‌ಆನನ್ನು ಅವತೀರ್ಣಗೊಳಿಸಿದುದು ಅಲ್ಲಾಹನ ಏಕತ್ವವನ್ನು ಸಾಬೀತುಗೊಳಿಸಲು ಮತ್ತು ಅದನ್ನು ಲೋಕದಲ್ಲಿ ಸ್ಥಾಪಿಸಲಿಕ್ಕಾಗಿದೆ. ಈ ಸೂರತ್‌ನಲ್ಲಿ ಬಹಳ ಸ್ಪಷ್ಟವಾಗಿಯೂ ಸಮಗ್ರವಾಗಿಯೂ ಏಕದೇವ ವಿಶ್ವಾಸವನ್ನು ವಿವರಿಸಲಾಗಿದೆ. ಈ ಸೂರತಿನ ವಚನಗಳ ಶಬ್ದಗಳ ಬಗ್ಗೆ ಗಾಢವಾಗಿ ಚಿಂತಿಸಿ ಕ್ರಿಯಾಶೀಲರಾಗುವ ಮೂಲಕ ಮನುಷ್ಯನು ನೈಜ ತೌಹೀದ್ ಅನುಷ್ಠಾನಕ್ಕೆ ತರಬಲ್ಲವನಾಗಿದ್ದಾನೆ. ನಾನು ಸೂರತುಲ್ ಇಖ್‌ಲಾಸ್ ಓದುವ ಮೂಲಕ ಪವಿತ್ರ ಖುರ್‌ಆನಿನ ಮೂರನೆಯ ಒಂದು ಭಾಗ ಓದಿದೆ ಎಂದು ಯಾರೂ ಭಾವಿಸಬಾರದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹಾಗೆ ಹೇಳಿದುದರ ಅರ್ಥ, ನೀವು ಅದನ್ನು ಪಠಿಸಿರಿ, ಏಕದೇವ ವಿಶ್ವಾಸದಲ್ಲಿ ನೆಲೆನಿಲ್ಲಿರಿ ಮತ್ತು ಅದರ ಪ್ರಕಾರ ಅನುಷ್ಠಾನ ಕರ್ಮಗಳನ್ನು ಮಾಡಿರಿ ಎಂದಾಗಿದೆ. ಪವಿತ್ರ ಖುರ್‌ಆನಿನ ಉಪದೇಶಗಳು ಏಕದೇವ ವಿಶ್ವಾಸವನ್ನು ಲೋಕದಲ್ಲಿ ಸ್ಥಾಪಿಸಲಿಕ್ಕೆಯೇ ಆಗಿದೆ. ಅದಕ್ಕೋಸ್ಕರ ಪ್ರತಿಯೊಬ್ಬನು ಪ್ರಯತ್ನ ಮಾಡಬೇಕಾಗಿದೆ ಮತ್ತು ದುಆ ಸಹ ಮಾಡಬೇಕು.

ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬ ವ್ಯಕ್ತಿಯನ್ನು ಒಂದು ಸೇನಾದಳದ ದಳಪತಿಯನ್ನಾಗಿ ಮಾಡಿ ಕಳುಹಿಸಿದ್ದರು. ಆ ವ್ಯಕ್ತಿ

ನಮಾಝ್‌ಗೆ ಇಮಾಮ್ ಆಗಿ ನಮಾಝ್ ಮಾಡಿಸುತ್ತಿದ್ದಾಗ ಪ್ರತಿಯೊಂದು ರಕಅತ್‌ನಲ್ಲಿ ಖಿರಾಅತಿನ ಕೊನೆಗೆ ಖುಲ್ ಹುವಲ್ಲಾಹು ಅಹದ್ ಎಂಬ ಸೂರತನ್ನು ಸಹ ಪಠಿಸುತ್ತಿದ್ದರು. ಸಹಾಬರು ಯುದ್ಧ ಕ್ಷೇತ್ರದಿಂದ ಮರಳಿ ಬಂದಾಗ ಈ ವಿಷಯವನ್ನು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿಸಿದರು. ಅವರು ಹೇಳಿದರು: ನೀವು ಆ ವ್ಯಕ್ತಿಯೊಂದಿಗೆ ಅದರ ಕಾರಣ ಏನೆಂದು ವಿಚಾರಿಸಿರಿ. ಸಹಾಬ ಆ ವ್ಯಕ್ತಿಯೊಂದಿಗೆ ವಿಚಾರಿಸಿದಾಗ ಆ ವ್ಯಕ್ತಿ ಹೇಳಿದರು: ಈ ಸೂರತ್‌ನಲ್ಲಿ ರಹ್ಮಾನ್ ಆಗಿರುವ ದೇವನ ಗುಣಗಳನ್ನು ವಿವರಿಸಲಾಗಿದೆ. ಆದುದರಿಂದ ನಾನು ಆ ಸೂರತನ್ನು ಪಠಿಸಲು ಇಷ್ಟಪಡುತ್ತೇನೆ. ಈ ವಿಷಯ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದಾಗ ಅವರು ಹೇಳಿದರು: ನೀವು ಆ ವ್ಯಕ್ತಿಯೊಂದಿಗೆ ಹೇಳಿರಿ ಅಲ್ಲಾಹನು ಆ ವ್ಯಕ್ತಿಯನ್ನು ಪ್ರೀತಿಸುತ್ತಿದ್ದಾನೆ ಎಂದು.

ಹಝ್‌ರತ್ ಅಬೀ ಬಿನ್ ಕಅಬ್(ರ) ಹೇಳುತ್ತಾರೆ: ಬಹುದೇವಾರಾಧಕರು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದರು: ನಿಮ್ಮ ಪ್ರಭುವಿನ ವಂಶ ವೃಕ್ಷವನ್ನು ವಿವರಿಸಿರಿ ಎಂದು. ಆಗ ಅಲ್ಲಾಹನು ಖುಲ್ ಹುವಲ್ಲಾಹು ಅಹದ್ ಎಂಬ ಸೂರತನ್ನು ಅವತೀರ್ಣಗೊಳಿಸಿದನು. ಅಲ್ಲಾಹನು ಸಮದ್ ಆಗಿರುವನು. ಅವನು ಯಾರ ಪಿತನೂ ಅಲ್ಲ, ಅವನಿಗೆ ಯಾವ ಪುತ್ರನೂ ಇಲ್ಲ. ಅವನು ಸೃಷ್ಟಿಸಿದ ಪ್ರತಿಯೊಂದು ನಿಶ್ಚಯವಾಗಿಯೂ ಮೃತವಾಗಲಿದೆ. ಯಾವುದು ಮೃತವಾಗಲಿವೆಯೋ ಅದಕ್ಕೆ ನಿಶ್ಚಯವಾಗಿಯೂ ಒಬ್ಬ ವಾರೀಸುದಾರನಿರುತ್ತಾನೆ. ಆದರೆ ಸರ್ವಶಕ್ತನಾದ ಅಲ್ಲಾಹನು ಮೃತನಾಗಲಾರನು ಅವನಿಗೆ ವಾರೀಸುದಾರರೂ ಇಲ್ಲ. ವಲಮ್ ಯಕುನ್‌ಲಹೂ ಕುಫ್‌ವನ್ ಅಹದ್ ಅವನಿಗೆ ಸದೃಶನಾಗಿ ಯಾರೂ ಇಲ್ಲ. ಅವನ ಹಾಗಿರುವವನು ಯಾರೂ ಇಲ್ಲ.

ಹಝ್‌ರತ್ ಅಬೂಹುರೈರ(ರ) ಹೇಳುತ್ತಾರೆ: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಜನರು ಪರಸ್ಪರ ಪ್ರಶ್ನಿಸುತ್ತಾರೆ. ಎಲ್ಲಾ ವಸ್ತುಗಳನ್ನು ಅಲ್ಲಾಹನು ಸೃಷ್ಟಿಸಿದ್ದರೆ ಅವನನ್ನು ಸೃಷ್ಟಿಸಿದವರು ಯಾರು? ನೀವು ಇಂತಹ ಜನರನ್ನು ಕಂಡರೆ ಖುಲ್ ಹುವಲ್ಲಾಹು ಅಹದ್ ಎಂದು ಹೇಳಿ ಪೂರ್ಣವಾಗಿ ಆ ಸೂರತನ್ನು ಪಠಿಸಿರಿ. ಅದರ ಅರ್ಥವನ್ನು ಗಾಢವಾಗಿ ಅಧ್ಯಯನ ಮಾಡಿರಿ. ಆಗ ನಿಮಗೆ ತಿಳಿಯುವುದು ಅಲ್ಲಾಹನನ್ನು ಸೃಷ್ಟಿಸುವ ಯಾವುದೂ ಇಲ್ಲವೆಂದು. ಅವನು ಅನಾದಿಯೂ ಅನಂತನೂ ಆಗಿದ್ದಾನೆ. ಅವನು ಯಾವಾಗಲೂ ಇದ್ದನು ಮುಂದೆ ಯಾವಾಗಲೂ ಇರುವನು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅನಂತರ ಶೈತಾನನ ಕೆಡುಕುಗಳಿಂದ ಅಲ್ಲಾಹನ ಅಭಯ ಯಾಚಿಸಿದರೆ ಶೈತಾನನು ಅವನಿಗೆ ಯಾವ ಹಾನಿಯನ್ನೂ ಉಂಟುಮಾಡಲು ಶಕ್ತನಾಗಲಾರನು.

ಹಝ್‌ರತ್ ಸುಹೈಬ್ ಬಿನ್ ಸಅದ್(ರ) ವರದಿ ಮಾಡುತ್ತಾರೆ: ಒಬ್ಬ ವ್ಯಕ್ತಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ತನ್ನ ದಾರಿದ್ರ್ಯದ ಬಗ್ಗೆ ಹೇಳಿದನು. ಆಗ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಮನೆಗೆ ಪ್ರವೇಶಿಸುವಾಗ ಅಲ್ಲಿ ಯಾರಾದರೂ ಇದ್ದರೆ ಅವರಿಗೆ ಅಸ್ಸಲಾಮು ಅಲೈಕುಮ್ ಎಂದು ಹೇಳಿರಿ. ಯಾರೂ ಇಲ್ಲವಾದರೆ ತನಗೆಯೇ ಸಲಾಮ್ ಹೇಳಿರಿ. ಅನಂತರ ಒಮ್ಮೆ ಖುಲ್ ಹುವಲ್ಲಾಹು ಅಹದ್ ಎಂಬ ಸೂರತ್ ಓದಿರಿ. ಆ ವ್ಯಕ್ತಿ ಈ ಉಪದೇಶದ ಪ್ರಕಾರ ವರ್ತಿಸಿದಾಗ ಅಲ್ಲಾಹನು ಆ ವ್ಯಕ್ತಿಗೆ ಎಷ್ಟು ಆಹಾರ ದಯಪಾಲಿಸಿದನೆಂದರೆ ಆ ವ್ಯಕ್ತಿಯ ನೆರೆಹೊರೆಯವರೂ ಅದರಿಂದ ಅನುಗ್ರಹ ಗಳಿಸಿದರು. ಆದುದರಿಂದ ಮನುಷ್ಯನು ಏಕದೇವ ವಿಶ್ವಾಸದ ಪಾಠವನ್ನು ಕಲಿತು ಅದರ ಪ್ರಕಾರ ಕೆಲಸಗಳನ್ನು ಮಾಡಿದರೆ, ಅಲ್ಲಾಹನು ಎಲ್ಲಾ ಶಕ್ತಿ ಸಾಮರ್ಥ್ಯಗಳ ಮಾಲಿಕನೆಂದು ಅರಿತುಕೊಂಡು ಕಾರ್ಯ ತತ್ಪರನಾದರೆ ಅಲ್ಲಾಹನು ಅವನಿಗೆ ಅಪರಿಮಿತವಾಗಿ ಅನುಗ್ರಹ ನೀಡುತ್ತಾನೆ. ಅಲ್ಲಾಹನು ಹೇಳುತ್ತಾನೆ, ಮುತ್ತಖಿಗೆ ಭಯಭಕ್ತಿಯುಳ್ಳವನಿಗೆ ಎಂತಹ ಸ್ಥಳಗಳಿಂದ ಆಹಾರವನ್ನು ಅಲ್ಲಾಹನು ದಯಪಾಲಿಸುತ್ತಾನೆ ಎಂದರೆ ಅವನಿಗೆ ಅದರ ಬಗ್ಗೆ ಯೋಚಿಸಲು ಸಹ ಸಾಧ್ಯವಿರಲಿಲ್ಲ.

ಹಝ್ರುತ್ ಜಾಬಿರ್(ರ)ರಿಂದ ವರದಿ: ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಯಾರು ಪ್ರತಿದಿನ ಐವತ್ತು ಸಲ ಖುಲ್ ಹುವಲ್ಲಾಹು ಅಹದ್ ಓದುವನೋ ಮರಣಾನಂತರ ಗೋರಿಯಲ್ಲಿ ಅವನೊಡನೆ ಹೇಳಲಾಗುವುದು – ಎದ್ದು ನಿಲ್ಲು, ಸ್ವರ್ಗದಲ್ಲಿ ಪ್ರವೇಶಿಸು ಎಂದು. ನಜ್ಜಾಶಿಯ ಸಹೋದರಿಯ ಮಗನಾದ ಇಬ್ನು ದೈಲಮಿ ವರದಿ ಮಾಡುತ್ತಾರೆ: ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಯಾರು ನಮಾಝಿನಲ್ಲಾಗಲಿ ಅಥವಾ ಇತರ ಸಮಯದಲ್ಲಾಗಲಿ ನೂರು ಸಲ ಖುಲ್ ಹುವಲ್ಲಾಹು ಅಹದ್ ಓದುವನೋ ಅವನಿಗೆ ಅಲ್ಲಾಹನು ಬೆಂಕಿಯಿಂದ ಸಂರಕ್ಷಣೆಯನ್ನು ಕಡ್ಡಾಯಗೊಳಿಸಿದನು. ಇದು ಸೂರತ್ ಇಖ್ಲಾಸ್‌ನ ಮಹತ್ವವಾಗಿದೆ.

ಖುಲ್ ಎಂದು ಪ್ರಾರಂಭವಾಗುವ ಮೂರು ಸೂರತ್‌ಗಳನ್ನು ಪಠಿಸುವ ಬಗ್ಗೆ ಹದೀಸಿನಲ್ಲಿ ಹಝ್‌ರತ್ ಉಖ್‌ಬಾ ಬಿನ್ ಆಮಿರ್ ಜಹ್‌ನೀ(ರ) ವರದಿ ಮಾಡುತ್ತಾರೆ: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಇವು ಎಂತಹ ವಚನಗಳಾಗಿವೆ ಮತ್ತು ಪ್ರಾರ್ಥನೆಯಾಗಿದೆ ಎಂದರೆ ಅವುಗಳ ಮೂಲಕ ಮನುಷ್ಯನು ಅಲ್ಲಾಹನ ಆಶ್ರಯ ಪಡೆಯುತ್ತಾನೆ ಮತ್ತು ಎಂದೂ ನಾಶವಾಗದಿರುತ್ತಾನೆ. ಅವನು ಎಲ್ಲಾ ಕೆಡುಕುಗಳಿಂದ ರಕ್ಷಿಸಲ್ಪಡುತ್ತಾನೆ. ಅಲ್ಲಾಹನ ಆಶ್ರಯವನ್ನು ಬೇಡಿಕೊಳ್ಳಲು ಇವುಗಳಿಗಿಂತ ಉತ್ತಮವಾದ ಬೇರೆ ಮಾರ್ಗವೇ ಇಲ್ಲ. ಹಝ್‌ರತ್ ಅಬೂ ಸಈದ್(ರ) ವರದಿ ಮಾಡುತ್ತಾರೆ: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜಿನ್ನ್‌ಗಳ ಮತ್ತು ಮನುಷ್ಯರ ಕೆಟ್ಟ ದೃಷ್ಟಿಯಿಂದ ಅಲ್ಲಾಹನ ಅಭಯ ಯಾಚಿಸುತ್ತಿದ್ದರು. ಪವಿತ್ರ ಖುರ್‌ಆನಿನ ಕೊನೆಯಲ್ಲಿ ಇರುವ ಖುಲ್ ಅಊಝು ಎಂದು ಪ್ರಾರಂಭವಾದ ಎರಡು ಸೂರತ್‌ಗಳು (ಮುಅವ್ವಿಝತೈನ್) ಅವತೀರ್ಣಗೊಂಡ ನಂತರ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಸೂರತ್‌ಗಳ ಮೂಲಕ ಅಭಯ ಯಾಚಿಸಲು ತೊಡಗಿದರು. ಹಝ್‌ರತ್ ಇಬ್ನು ಯಾಬಿಸ್(ರ) ವರದಿ ಮಾಡುತ್ತಾರೆ: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು

ಅಲೈಹಿ ವಸಲ್ಲಮರು ಒಮ್ಮೆ ನನ್ನೊಂದಿಗೆ ಹೇಳಿದರು: ಓ ಇಬ್ನು ಯಾಬಿಸ್ ಅಲ್ಲಾಹನ ಅಭಯ ಯಾಚಿಸುವ ಅತ್ಯುತ್ತಮವಾದ ವಚನಗಳನ್ನು ಹೇಳಿ ಕೊಡಲೇ? ನಾನು ಹೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ ನನಗೆ ಹೇಳಿ ಕೊಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು ಸೂರತುಲ್ ಫಲಖ್ ಮತ್ತು ಸೂರತುನ್ನಾಸ್ ಎಂಬ ಎರಡು ಸೂರತ್‌ಗಳು ಅಂತಹ ವಚನಗಳಾಗಿವೆ.

ಪವಿತ್ರ ಖುರ್‌ಆನಿನ ಕೊನೆಯ ಎರಡು ಸೂರತ್‌ಗಳ ಮಹತ್ವವನ್ನು ವಿವರಿಸುತ್ತಾ ಒಬ್ಬ ಸಹಾಬಿ ಹೇಳಿದರು: ಒಮ್ಮೆ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಪ್ರಯಾಣ ಮಾಡುತ್ತಿದ್ದೆವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಹಿಂದೆ ಬಂದು ನಿಂತು ನನ್ನ ಭುಜದಲ್ಲಿ ಕೈಯಿರಿಸಿ ಹೇಳಿದರು: ಅಊಝುಬಿ ರಬ್ಬಿಲ್ ಫಲಖ್ ಪಠಿಸಿರಿ ಎಂದು. ನಾನು ಹಾಗೆ ಪಠಿಸಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಸೂರತನ್ನು ಪೂರ್ಣವಾಗಿ ಪಠಿಸಿದರು. ನಾನು ಸಹ ಅವರ ಜೊತೆ ಪಠಿಸಿದೆ. ಅನಂತರ ಅಊಝುಬಿ ರಬ್ಬಿನ್ನಾಸ್ ಪಠಿಸಲು ಹೇಳಿದರು. ಅವರು ಪೂರ್ಣ ಸೂರತನ್ನು ಪಠಿಸಿದರು. ನಾನು ಸಹ ಅವರ ಜೊತೆ ಪಠಿಸಿದೆ. ಅವರು ಹೇಳಿದರು, ನಮಾಝ್‌ನಲ್ಲಿ ಈ ಎರಡು ಸೂರತ್‌ಗಳನ್ನು ಪಠಿಸಿರಿ. ಉಖ್‌ಬಾ ಬಿನ್ ಆಮಿರ್ ಜಹ್‌ನೀ[ರ] ವರದಿ ಮಾಡುತ್ತಾರೆ: ಒಂದು ಪ್ರಯಾಣದ ಕಾಲದಲ್ಲಿ ನಾನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗಿದ್ದೆ. ಫಜರ್ ಸಮಯದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಝಾನ್ ಕರೆ ನೀಡಿ ಇಖಾಮತ್ ಪಠಿಸಿದರು. ನನ್ನನ್ನು ಬಲಗಡೆಗೆ ನಿಲ್ಲಿಸಿ ನಮಾಝ್‌ನಲ್ಲಿ ಪವಿತ್ರ ಖುರ್‌ಆನಿನ ಎರಡು ಕೊನೆಯ ಅಧ್ಯಾಯಗಳನ್ನು ಪಠಿಸಿದರು. ನಮಾಝ್ ಅನುಷ್ಠಿಸಿದ ನಂತರ ಅವರು ನನ್ನೊಂದಿಗೆ ಕೇಳಿದರು: ನೀನು ಏನು ನೋಡಿದೆ? ನಾನು ಹೇಳಿದೆ: ಓ ಅಲ್ಲಾಹನ ಸಂದೇಶವಾಹಕರೇ ನಿಜವಾದುದನ್ನು ನಾನು ನೋಡಿದೆ. ಅವರು ಹೇಳಿದರು: ನೀನು ನಿದ್ರಿಸುವ ಮೊದಲು ಮತ್ತು ನಿದ್ರೆಯಿಂದ ಎದ್ದಾಗ ಈ ಎರಡು ಸೂರತ್‌ಗಳನ್ನು ಪಠಿಸು.

ಈ ಸೂರತ್‌ಗಳ ಮಹತ್ವ ಮೇಲೆ ವಿವರಿಸಿದಂತೆ ಇದೆ. ಈ ಕಾಲಘಟ್ಟದಲ್ಲಿ ಈ ಸೂರತ್‌ಗಳನ್ನು ಪಠಿಸುವ ಮಹತ್ವ ಬಹಳ ವರ್ಧಿಸಿದೆ. ನಮ್ಮ ಆಧ್ಯಾತ್ಮಿಕ ಅಭಿವೃದ್ಧಿಗೋಸ್ಕರ ಮತ್ತು ಶೈತಾನನ ಆಕ್ರಮಣಗಳಿಂದ ರಕ್ಷಿಸಲ್ಪಡಲು ಈ ಸೂರತ್‌ಗಳನ್ನು ಪಠಿಸಬೇಕು. ಇಸ್ಲಾಮಿನ ವಿರುದ್ಧ ಹೂಡಲಾಗುವ ಗೂಢ ತಂತ್ರಗಳಿಂದ ಜಮಾಅತನ್ನು ರಕ್ಷಿಸಲು ಇದು ಆವಶ್ಯಕವಾಗಿದೆ. ಇಂದಿನ ಕಾಲದಲ್ಲಿ ಇಸ್ಲಾಮಿನ ವಿರುದ್ಧ ಇಸ್ಲಾಮ್ ವಿರುದ್ಧ ಶಕ್ತಿಗಳು ಬಹಳ ಚಾಣಾಕ್ಷತನದಿಂದ ಗೂಢ ತಂತ್ರಗಳನ್ನು ರೂಪಿಸುತ್ತಿದ್ದಾರೆ. ಇನ್ನೊಂದು ಕಡೆ ಮುಸ್ಲಿಮ್ ನಾಮಧೇಯ ಮತಪಂಡಿತರು ಮತ್ತು ನಾಯಕರು ಎಂತಹ ಪರಿಸ್ಥಿತಿಯನ್ನು ಸೃಷ್ಟಿಸಿದ್ದಾರೆ ಎಂದರೆ ಅಶಾಂತಿ ಕ್ಷೋಭೆಗಳು ಸೃಷ್ಟಿಸಲ್ಪಟ್ಟಿವೆ. ಮುಸ್ಲಿಮ್ ಮತಪಂಡಿತರು ಮುಸ್ಲಿಮ್ ಜನ ಸಾಮಾನ್ಯರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಉದ್ರೇಕಿಸಿ ಶೈತಾನೀ ಶಕ್ತಿಗಳು ಬಲಿಷ್ಠವಾಗುವಂತೆ ಸಂದರ್ಭ ಒದಗಿಸುತ್ತಿದ್ದಾರೆ. ಅದೇ ರೀತಿ ಇಂದಿನ ಕಾಲದಲ್ಲಿ ನಾಸ್ತಿಕವಾದವು ಸಹ ಬಹಳ ತೀವ್ರವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಸೀಹ್ ಮೌಊದರ ಶತ್ರುಗಳ ಆಕ್ರಮಣಗಳಿಗೆ ಗುರಿಯಾಗುವಾಗ ನೀವು ಹೀಗೆ ಪ್ರಾರ್ಥಿಸಿರಿ: ಆಂತರಿಕವಾಗಿ ಮತ್ತು ಬಾಹ್ಯವಾಗಿ ಶತ್ರುಗಳಾಗಿರುವ ಸೃಷ್ಟಿಗಳ ಕೆಡುಕುಗಳಿಂದ ನಾನು ಅಲ್ಲಾಹನ ಅಭಯವನ್ನು ಬೇಡಿಕೊಳ್ಳುತ್ತೇನೆ. ಅವನು ಬೆಳಗ್ಗೆಯ ಮಾಲಿಕನಾಗಿದ್ದಾನೆ. ಪ್ರಕಾಶವನ್ನು ಪ್ರಕಟಿಸುವುದು ಅವನ ಅಧಿಕಾರಕ್ಕೊಳಪಟ್ಟಿದೆ. ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವ ಪ್ರಕಾಶವು ಆಧ್ಯಾತ್ಮಿಕ ಪ್ರಕಾಶವಾಗಿದೆ. ಅದು ಅವರ ಆಗಮನದೊಂದಿಗೆ ಉದಯವಾಯಿತು. ಮಸೀಹ್ ಮೌಊದರನ್ನು ನಿರಾಕರಿಸುವುದರಿಂದ ಸಂಭವಿಸಲಿರುವ ಗಲಬೆಗೊಂದಲಗಳ ರಾತ್ರಿಯ ಅಂಧಕಾರದ ಕೆಡುಕುಗಳಿಂದ ರಕ್ಷಿಸಲ್ಪಡಲು ನಾನು ಅಲ್ಲಾಹನ ಅಭಯವನ್ನು ಯಾಚಿಸುತ್ತೇನೆ ಎಂದು ಪ್ರಾರ್ಥಿಸಿರಿ.

ಒಂದು ಕಡೆ ಇಸ್ಲಾಮಿನ ಶತ್ರುಗಳಾದ ಜನರಿದ್ದಾರೆ. ಅವರು ಇಸ್ಲಾಮಿನ ತತ್ವಗಳ ವಿರುದ್ಧ ಆಕ್ಷೇಪಿಸುತ್ತಿದ್ದಾರೆ. ಇನ್ನೊಂದು ಕಡೆ ಇಸ್ಲಾಮಿನ ಮತಪಂಡಿತರಿದ್ದಾರೆ ಅವರು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಲು ಸಿದ್ಧರಾಗುವುದಿಲ್ಲ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಜನ ಸಾಮಾನ್ಯರನ್ನು ಉದ್ರೇಕಿಸಲು ಮಗ್ನರಾಗಿದ್ದಾರೆ. ಪಾಕಿಸ್ಥಾನದ ಮತಪಂಡಿತರು ಈ ಕೆಲಸ ಮಾಡುವುದರಲ್ಲಿ ಮುಂಚೂಣಿಯಲ್ಲಿದ್ದಾರೆ. ಆದುದರಿಂದ ಇಂತಹ ಪರಿಸ್ಥಿತಿಯಲ್ಲಿ ಪಾಕಿಸ್ಥಾನದ ಅಹ್ಮದಿಯರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ನಡೆವಳಿಕೆಯನ್ನು ಜಾರಿಗೊಳಿಸುವುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸೂರತುಲ್ ಫಲಖ್‌ನಲ್ಲಿ ಮಿನ್‌ಶರ್‍ರಿ ಗಾಸಿಖಿನ್ ಇದ಼ಾ ವಖಬ್ ಅಂಧಕಾರ ಆವರಿಸುವಾಗ ಉಂಟಾಗುವ ಕೆಡುಕುಗಳಿಂದಲೂ ರಕ್ಷಿಸಲು ಅಲ್ಲಾಹನ ಅಭಯವನ್ನು ಯಾಚಿಸಲಾಗಿದೆ. ಗಾಸಿಖ್ ಎಂದರೆ ರಾತ್ರಿ. ವಖಬ ಎಂದರೆ ಅಂಧಕಾರ ಕವಿಯುವುದು. ಅಂಧಕಾರಮಯ ರಾತ್ರಿಯ ಕೆಡುಕುಗಳು ಮಸೀಹ್ ಮೌಊದರನ್ನು ನಿರಾಕರಿಸುವುದರ ಕಾರಣದಿಂದ ಸಂಭವಿಸಲಿರುವ ಅಂಧಕಾರದ ಕೆಡುಕುಗಳಾಗಿವೆ. ಅವುಗಳಿಂದ ಅಭಯವನ್ನು ಯಾಚಿಸಲಾಗಿದೆ.

ಮುಸ್ಲಿಮರ ಸ್ಥಿತಿಯ ಬಗ್ಗೆ ಖೇದವಾಗುತ್ತದೆ. ಅಲ್ಲಾಹನು ಅವರಿಗೆ ಒಂದು ಪ್ರಾರ್ಥನೆಯನ್ನು ಕಲಿಸಿದನು. ಆದರೆ ಅವರು ಅದನ್ನು ನಿರ್ಲಕ್ಷಿಸಿದರು. ಮುಸ್ಲಿಮರು ಈ ಗಲಬೆಗೊಂದಲಗಳಲ್ಲಿ ಮುಳುಗಿದ್ದಾರೆ. ಈ ಕಾರಣದಿಂದ ಮುಸ್ಲಿಮೇತರರಿಗೆ ಮುಸ್ಲಿಮರ ವಿರುದ್ಧ ಆಕ್ಷೇಪ ಮಾಡಲು ಸಂದರ್ಭ ಲಭಿಸುತ್ತಿದೆ. ಮುಸ್ಲಿಮರ ಈ ಸ್ಥಿತಿ ನಮ್ಮ ಗಮನ ಸೆಳೆಯುತ್ತದೆ. ನಾವು ಪವಿತ್ರ ಖುರ್‌ಆನಿನ ಈ ಸೂರತ್‌ಗಳನ್ನು ಗಾಢವಾಗಿ ಅಧ್ಯಯನ ಮಾಡಬೇಕು. ಮತ್ತು ಆ ಮೂಲಕ ಅಂಧಕಾರಗಳಿಂದ ನಾವು ರಕ್ಷಿಸಲ್ಪಡುವವರಾಗಬೇಕು.

ಸೂರತುನ್ನಾಸ್‌ನಲ್ಲಿ ಅಲ್ಲಾಹನ ಪರಿಪಾಲನೆ, ಅವನು ಮಾಲಿಕನಾಗಿರುವ ಬಗ್ಗೆ, ಅವನು ನೈಜ ಆರಾಧ್ಯನಾಗಿರುವ ಬಗ್ಗೆ ವಿವರಿಸಲಾಗಿದೆ. ಅಲ್ಲಾಹನ ಆಶ್ರಯ ಬೇಡಿಕೊಳ್ಳಲು ಮತ್ತು ಶೈತಾನನ ದುರ್ಬೋಧನೆಗಳಿಂದ ರಕ್ಷಣೆ ಯಾಚಿಸಲು ಸೂಚಿಸಲಾಗಿದೆ.

ಇಂದಿನ ಕಾಲದಲ್ಲಿ ನಾಸ್ತಿಕವಾದ ಮತ್ತು ಲೌಕಿಕತೆ ಬಹಳ ತೀವ್ರವಾಗಿದೆ. ಲೌಕಿಕತೆ ತನ್ನ ಮುಷ್ಠಿಯನ್ನು ಎಷ್ಟು ಆಳವಾಗಿ ಸಮಾಜದಲ್ಲಿ ಊರಿದೆ ಎಂದರೆ ಕೆಲವು ಯುವಕರು ಅದರಿಂದ ಪ್ರಭಾವಿತರಾಗುತ್ತಿದ್ದಾರೆ. ಆದುದರಿಂದ ನಾವು ಈ ಪ್ರಾರ್ಥನೆಗಳನ್ನು ನಮ್ಮ ಮೇಲೆ ಊದುವಾಗ ನಮ್ಮ ಮಕ್ಕಳ ಮೇಲೆಯೂ ಊದಬೇಕು. ಆ ಮೂಲಕ ನಮ್ಮ ಪೀಳಿಗೆಗಳು ಸಹ ಪ್ರತಿಯೊಂದು ರೀತಿಯ ಕೆಡುಕಿನಿಂದಲೂ ರಕ್ಷಿಸಲ್ಪಡುವಂತಾಗಲಿ. ಅವರು ಧರ್ಮದಲ್ಲಿ ನೆಲೆ ನಿಲ್ಲುವವರೂ ಅಲ್ಲಾಹನ ಏಕತ್ವವನ್ನು ಮನವರಿಕೆ ಮಾಡಿಕೊಳ್ಳುವವರೂ ಆಗುವಂತಾಗಲಿ. ನಮ್ಮವರಲ್ಲಿ ಪ್ರತಿಯೊಬ್ಬರು ಈ ಸೂರತ್‌ಗಳ ವಿಷಯಗಳನ್ನು ಅರ್ಥ ಮಾಡಿಕೊಂಡು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆಗಳನ್ನು ಅನುಸರಿಸುವವರೂ ಅನುಷ್ಠಾನಕ್ಕೆ ತರುವವರೂ ಆಗುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನ ಏಕತ್ವದ ವಿಷಯ ನಮಗೆ ಸ್ಪಷ್ಟವಾಗಿ ತಿಳಿಯುವಂತಾಗಲಿ. ಅಲ್ಲಾಹನ ಹೊರತು ಬೇರೆ ಯಾರ ಮುಂದೆಯೂ ನಾವು ಬಾಗುವವರಾಗದಿರಲಿ. ಅಲ್ಲಾಹನನ್ನೇ ಎಲ್ಲಾ ಶಕ್ತಿಗಳ ಉದ್ಭವ ಸ್ಥಾನವೆಂದು ಮನವರಿಕೆ ಮಾಡಿಕೊಂಡು ನಮ್ಮ ಹೃದಯದಲ್ಲಿ ಮಾತ್ರವಲ್ಲ ನಮ್ಮ ಕರ್ಮಗಳಲ್ಲಿಯೂ ಅದನ್ನು ಸಾಬೀತುಗೊಳಿಸುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನೇ ಎಲ್ಲಾ ಶಕ್ತಿಗಳ ಉದ್ಭವ ಸ್ಥಾನವೆಂದೂ ಅವನೇ ಪ್ರತಿಯೊಂದು ಪ್ರಕಾಶದ ಮೂಲಸ್ಥಾನವೆಂದೂ ಪ್ರತಿಯೊಂದು ಅನುಗ್ರಹ ದಯಪಾಲಿಸುವವನೆಂದೂ ನಾವು ಮನವರಿಕೆ ಮಾಡುವಂತಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis****(atba)*

*At Masjid Baithul Futhuh, London. On 16-02-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon